ಕರ್ನಾಟಕ ಸರಕಾರ

ವಾರ್ತಾ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ: 27-12-2014

## ವಿಷ್ಣುವರ್ಧನ್ ಸ್ಮಾರಕ ಶಂಕುಸ್ಥಾಪನೆ ಸಮಾರಂಭದ ಬಗ್ಗೆ

ಡಿಸೆಂಬರ್ 30 ರಂದು ಕೆಂಗೇರಿಯ ಮೈಲಸಂದ್ರ ಗ್ರಾಮದಲ್ಲಿ ಶಂಕುಸ್ಥಾಪನೆಗೊಳ್ಳಲಿರುವ ಡಾ. ವಿಷ್ಣುವರ್ಧನ್ ಸ್ಮಾರಕದ ಆಮಂತ್ರಣ ಪತ್ರಿಕೆ ಹಾಗೂ ಬ್ಯಾಡ್ಜ್‌ಗಳನ್ನು ದಿನಾಂಕ 29-12-2014 ರಂದು ಕಚೇರಿ ವೇಳೆಯಲ್ಲಿ ಸುದ್ದಿ ಮತ್ತು ಪತ್ರಿಕಾ ಶಾಖೆಯಿಂದ ಪಡೆದು ಕೊಳ್ಳುವಂತೆ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಲಾಗಿದೆ.

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ವಾರ್ತಾ ಸಚಿವರ ಪ್ರವಾಸ

ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ)

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಮತ್ತು ಹಜ್ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಡಿಸೆಂಬರ್ 29 ರಿಂದ 30 ರವರೆಗೆ ನವದೆಹಲಿಯಲ್ಲಿ ಪ್ರವಾಸ ಮಾಡುವರು.

ಬಾಬು:ಜಿಪಿಆರ್.

## ಡಿಸೆಂಬರ್ 30 ರಂದು ಡಾ. ವಿಷ್ಣುವರ್ಧನ್ ಸ್ಮಾರಕಕ್ಕೆ ಮುಖ್ಯಮಂತ್ರಿಗಳಿಂದ ಶಂಕುಸ್ಥಾಪನೆ

ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ)

ಡಾ. ವಿಷ್ಣುವರ್ಧನ್ ಮುಖ್ಯರಸ್ತೆ ಮೈಲಸಂದ್ರ ಗ್ರಾಮ, ಕೆಂಗೇರಿಯಲ್ಲಿರುವ ಡಾ. ವಿಷ್ಣುವರ್ಧನ್ ಅವರ ಸ್ಮಾರಕಕ್ಕೆ ಡಿಸೆಂಬರ್ 30 ರಂದು ಬೆಳಗ್ಗೆ 10-00 ಗಂಟೆಗೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಕನ್ನಡ ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ತಿಳಿಸಿದರು.

ಅವರು ಇಂದು ಬೆಂಗಳೂರು ವಾರ್ತಾಸೌಧದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಮೈಲಸಂದ್ರ ಗ್ರಾಮ ಸರ್ವೆ ನಂ 22 ಸರ್ಕಾರಿ ನಂಬರು ಆಗಿದ್ದು 108 ಎಕರೆ, 6 ಗುಂಟೆ ವಿಸ್ತೀರ್ಣ ಇರುತ್ತದೆ. ಸದರಿ ಸರ್ವೆ ನಂಬರ್‌ನಲ್ಲಿ ಸರ್ಕಾರದ ಆದೇಶದಂತೆ ದಿನಾಂಕ 14-12-1935 ರಲ್ಲಿ ಸರ್ಕಾರಿ ಮುಫತ್ ಕಾವಲಿಗೆ 78 ಎಕರೆ 18 ಗುಂಟೆ ಪ್ರದೇಶವನ್ನು ಕಾಯ್ದಿರಿಸಲಾಗಿರುತ್ತದೆ. ಉಳಿದ 29 ಎಕರೆ ಪ್ರದೇಶವನ್ನು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಅವರ ಪ್ರಕರಣದನ್ವಯ ದಿನಾಂಕ 20-4-2001 ರ ಆದೇಶದಂತೆ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿ ಆದೇಶ ಹೊರಡಿಸಿರುತ್ತಾರೆ. ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ ಪ್ರದೇಶದ ಪೈಕಿ 2 ಎಕರೆ ಪ್ರದೇಶವನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಅವರು ತಮ್ಮ ಆದೇಶದಲ್ಲಿ ಡಾ. ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕಾಗಿ ಮಂಜೂರು ಮಾಡಿರುತ್ತಾರೆ. ಅದರಂತೆ ಮ್ಯೂಟೇಷನ್ ಅಂಗೀಕರಿಸಿ ಆರ್.ಟಿ.ಸಿ. ಯಲ್ಲಿ ಇಂದೀಕರಣ ಮಾಡುವ ಸಂದರ್ಭದಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ ಎಂದು ಅವರು ತಿಳಿಸಿದರು.

ಅಲ್ಲದೆ, ಈ ಪ್ರದೇಶದಲ್ಲಿ ಸಭಾಂಗಣ, ಗ್ರಂಥಾಲಯ ನಿರ್ಮಾಣ ಹಾಗೂ ಚಿತ್ರರಂಗಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳನ್ನು ಸಹ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಈ ಸ್ಮಾರಕ ನಿರ್ಮಾಣಕ್ಕೆ ರೂ. 11 ಕೋಟಿ ಅನುದಾನ ಬಜೆಟ್‌ನಲ್ಲಿ ಮೀಸಲಿಟ್ಟಿದ್ದು ಈ ಕಾರ್ಯವು ಒಂದೂವರೆ ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಹಿರಿಯ ನಟಿ ಭಾರತಿ ವಿಷ್ಣುವರ್ಧನ್, ಐದು ವರ್ಷಗಳಿಂದ ವಿಷ್ಣುವರ್ಧನ್ ಅಭಿಮಾನಿಗಳು ಇವರ ಸ್ಮಾರಕ ನಿರ್ಮಾಣಕ್ಕೆ ಕಾದಿದ್ದಾರೆ. ಸರ್ಕಾರವು ನನ್ನ ಬೆಂಬಲಕ್ಕೆ ನಿಂತು ಭೂಮಿಯನ್ನು ಮಂಜೂರು ಮಾಡಿರುವುದು ಸಂತಸ ತಂದಿದೆ. ಸಾಹಸಸಿಂಹ ಭಾಗ-2 ಪುಸ್ತಕವನ್ನು ಅಂದು ಮುಖ್ಯಮಂತ್ರಿಗಳು ಬಿಡುಗಡೆ ಮಾಡಲಿದ್ದಾರೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಶಂಕರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಎನ್.ಆರ್. ವಿಶುಕುಮಾರ್, ನಟ ಅನಿರುದ್ಧ್, ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಕವನ:ಜಿಪಿಆರ್:

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2014-15ನೇ ಸಾಲಿನಲ್ಲಿ 1522 ಸಂಘ-ಸಂಸ್ಥೆಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲು ಅನುದಾನ ಬಿಡುಗಡೆ

**ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ)**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹೆಚ್ಚ ವ್ಯಾಪಕವಾಗಿ ಮತ್ತು ವಿಸ್ತೃತವಾಗಿ ನಾಡು-ನುಡಿ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು 2014-15 ನೇ ಸಾಲಿನಲ್ಲಿ ಸಂಘ-ಸಂಸ್ಥೆಗಳಿಗೆ ಅನುದಾನ ನೀಡುವ ಪದ್ಧತಿಯಲ್ಲಿ ಹೊಸ

ಮಾರ್ಗಸೂಚಿಗಳನ್ನು ಆಗಸ್ಟ್ ತಿಂಗಳಿನಲ್ಲಿ ರಚಿಸುವ ಮೂಲಕ ಮಾರ್ಪಡಿಸಲಾಯಿತು. ನಾಡಿನಾದ್ಯಂತ ಪತ್ರಿಕಾ ಪ್ರಕಟಣೆ, ಪತ್ರಿಕಾ ಜಾಹೀರಾತು ಹಾಗೂ ವೆಬ್‌ಸೈಟ್ ಮೂಲಕ ವ್ಯಾಪಕ ಪ್ರಚಾರ ನೀಡಲಾಯಿತು.

ಹಿಂದಿನ ವರ್ಷಗಳಲ್ಲಿ ವರ್ಷಪೂರ್ತಿ ನಡೆಯುತ್ತಿದ್ದ ಧನಸಹಾಯ ಪ್ರಕ್ರಿಯೆಯನ್ನು ಕಾಲಬದ್ಧಗೊಳಿಸಿ, ಈ ಬಾರಿ ವೇಳಾಪಟ್ಟಿಯಂತೆ ಧನಸಹಾಯ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಸ್ತುತ ವರ್ಷ ವ್ಯಾಪಕ ಪ್ರಚಾರ ನೀಡಿರುವ ಪರಿಣಾಮವಾಗಿ ಸಾಮಾನ್ಯ ವರ್ಗದಲ್ಲಿ 1156 ಸಂಸ್ಥೆಗಳು, ವಿಶೇಷ ಘಟಕ ಯೋಜನೆಯಡಿ 306 ಸಂಸ್ಥೆಗಳು ಮತ್ತು ಗಿ.ಉ.ಯೋ ಅಡಿಯಲ್ಲಿ 60 ಸಂಸ್ಥೆಗಳು ಒಟ್ಟು 1522 ಸಂಸ್ಥೆಗಳು ನೆರವು ಪಡೆಯಲು ಸಾಧ್ಯವಾಗಿದೆ. ಈ ಹೊಸ ಪ್ರಕ್ರಿಯೆಯಿಂದ ಒಟ್ಟು 790 ಸಂಸ್ಥೆಗಳಿಗೆ ಮೊದಲ ಬಾರಿಗೆ ಸರ್ಕಾರದ ಆರ್ಥಿಕ ನೆರವು ಒದಗಿಸಿದಂತಾಗಿದೆ. 2014-15 ನೇ ಸಾಲಿನಲ್ಲಿ ರಾಜ್ಯದಲ್ಲಷ್ಟೇ ಅಲ್ಲದೆ ಜಗತ್ತಿನಾದ್ಯಂತ ಕನ್ನಡ ಕೆಲಸದಲ್ಲಿ ತೊಡಗಿರುವ ವಿವಿಧ ಅನಿವಾಸಿ ಸಂಘ-ಸಂಸ್ಥೆಗಳನ್ನು ಗುರುತಿಸಿ, ಅವುಗಳ ಧನಸಹಾಯ ಕೋರಿಕೆ ಮತ್ತು ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ಗಮನಿಸಿ ಹೊರರಾಜ್ಯ ಮತ್ತು ದೇಶ-ವಿದೇಶಗಳ ಸುಮಾರು 19 ವಿವಿಧ ಸಂಘ-ಸಂಸ್ಥೆಗಳಿಗೆ ಒಟ್ಟು ರೂ 71.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ವರ್ಷಾಂತ್ಯದವರೆಗೆ ನಡೆಯುತ್ತಿದ್ದ ಅನುದಾನ ಪ್ರಕ್ರಿಯೆಯನ್ನು ಈಗ ಡಿಸೆಂಬರ್ ಅಂತ್ಯಕ್ಕೆ ಸಂಪೂರ್ಣವಾಗಿ ಮಂಜೂರು ಮಾಡಿ ಬಿಡುಗಡೆ ಮಾಡುವ ಮೂಲಕ ಒಂದು ಕಾಲಬದ್ಧ ವ್ಯವಸ್ಥೆಗೆ ಚಾಲನೆ ನೀಡಲಾಗಿದೆ. ವಿಕೇಂದ್ರೀಕೃತ ವ್ಯವಸ್ಥೆಯ ಮೂಲಕ ಅರ್ಜಿ ಸ್ವೀಕರಿಸಿದ್ದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಸಂಘ-ಸಂಸ್ಥೆಗಳಿಗೂ ಪ್ರಾತಿನಿಧ್ಯ ದೊರಕಿದೆ. ಇದಲ್ಲದೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಕಲಾವಿದರಿಗೆ ವಾದ್ಯ ಪರಿಕರಗಳು ಮತ್ತು ವೇಷಭೂಷಣ ಖರೀದಿಗಾಗಿ ಧನಸಹಾಯ, ಚಿತ್ರ ಕಲಾವಿದರಿಗೆ ಮತ್ತು ಶಿಲ್ಪಿಗಳಿಗೆ ತಮ್ಮ ಕಲಾಕೃತಿಗಳ ಪ್ರದರ್ಶನ ಆಯೋಜಿಸಲು ಧನಸಹಾಯ ನೀಡುವ ಮೂಲಕ ಕಲಾವಿದರು/ಸಂಘ-ಸಂಸ್ಥೆಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.

ಈ ಬಾರಿ ಹಿಂದಿನ ವರ್ಷಕ್ಕೆ ಹೋಲಿಸಿದ್ದಲ್ಲಿ 705 ಹೊಸ ಸಂಘಟನೆಗಳು/ಕಲಾವಿದರು ಅನುದಾನ ಪಡೆದಿವೆ. ರಾಜ್ಯಾದ್ಯಂತ ಒಟ್ಟು ಸುಮಾರು 152 ಸಂಘ-ಸಂಸ್ಥೆ/ಕಲಾವಿದರುಗಳಿಗೆ ವಿವಿಧ ಯೋಜನೆಯಡಿ ಧನಸಹಾಯ ನೀಡಿ ಪ್ರೋತ್ಸಾಹಿಸಲಾಗಿದೆ.

2013-14 ನೇ ಸಾಲಿನಲ್ಲಿ ಡಿಸೆಂಬರ್ ಅಂತ್ಯಕ್ಕೆ ಸಂಘ-ಸಂಸ್ಥೆಗಳಿಗೆ ಪ್ರೋತ್ಸಾಹ ಧನಸಹಾಯವಾಗಿ ಸಾಮಾನ್ಯ ವರ್ಗದಲ್ಲಿ ರೂ 2,20,00,000/- ವಿಶೇಷ ಘಟಕ ಯೋಜನೆಯಡಿ ರೂ 4,75,00,000/- ಮತ್ತು ಗಿರಿಜನ ಉಪಯೋಜನೆಯಡಿ ರೂ 94,00,000/- ಗಳ ಅನುದಾನವನ್ನಷ್ಟೆ ಬಿಡುಗಡೆ ಮಾಡಲಾಗಿತ್ತು. 2013-14 ರ ಸಾಲಿನಲ್ಲಿ ಮಾರ್ಚ್ ಅಂತ್ಯಕ್ಕೆ ಸಂಘ-ಸಂಸ್ಥೆಗಳಿಗೆ ಪ್ರೋತ್ಸಾಹ ಧನಸಹಾಯವಾಗಿ ಸಾಮಾನ್ಯ ವರ್ಗದಲ್ಲಿ ರೂ 14,19,80,000/- ವಿಶೇಷ ಘಟಕ ಯೋಜನೆಯಡಿ ರೂ 9,32,39,000/- ಮತ್ತು ಗಿರಿಜನ ಉಪಯೋಜನೆಯಡಿ ರೂ 3,54,46,000/-ಗಳ ಅನುದಾನ ಬಿಡುಗಡೆ ಮಾಡಲಾಯಿತು. 2013-14 ನೇ ಸಾಲಿನಲ್ಲಿ ಸಾಮಾನ್ಯ ವರ್ಗದ 451 ಸಂಘ-ಸಂಸ್ಥೆಗಳು, ವಿಶೇಷ ಘಟಕ ಯೋಜನೆಯಡಿ 229 ಸಂಘ ಸಂಸ್ಥೆಗಳು, ಗಿರಿಜನ ಉಪಯೋಜನೆಯಡಿ 52 ಸಂಸ್ಥೆಗಳು ಹೀಗೇ ಒಟ್ಟು 732 ಸಂಘ-ಸಂಸ್ಥೆಗಳಿಗೆ ಅನುದಾನ ನೀಡಲಾಗಿತ್ತು. ಒಟ್ಟಾರೆ ಕಳೆದ ಆರ್ಥಿಕ ವರ್ಷದಲ್ಲಿ ರೂ 27,06,65,000/- ಅನುದಾನವನ್ನು ನೀಡಲಾಗಿದೆ.

2014*-5 ನೇ ಸಾಲಿನಲ್ಲಿ ಸಂಘ-ಸಂಸ್ಥೆಗಳಿಂದ ಕ್ರಿಯಾಯೋಜನೆಗಳ ಪ್ರಸ್ತಾವನೆ ಮತ್ತು ಧನಸಹಾಯ ಬೇಡಿಕೆಗಳನ್ನು ಆಹ್ವಾನಿಸುವ ಮೂಲಕ ಸಂಸ್ಥೆಗಳ ನಿರ್ದಿಷ್ಟ ಯೋಜನೆ ಮತ್ತು ಅಗತ್ಯತೆಯನ್ನು ಅರಿಯುವ ಪ್ರಯತ್ನ ಮಾಡಲಾಯಿತು. ಏಕಕಾಲಕ್ಕೆ ಎಲ್ಲ ಪ್ರಸ್ತಾವನೆಗಳನ್ನು ಪರಿಶೀಲಿಸುವುದರಿಂದ ಯೋಜನೆಗಳ ಪ್ರಾಮುಖ್ಯತೆ ಮತ್ತು ಸಂಘ-ಸಂಸ್ಥೆಗಳ ಚಟುವಟಿಕೆಗಳ ಆಧಾರದಲ್ಲಿ ಧನಸಹಾಯ ನಿಗದಿ ಮಾಡಲು ಹೆಚ್ಚು ಸಹಕಾರಿಯಾಗಿದೆ.

ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಆಯಾ ಸಂಸ್ಥೆಗಳು ಕಾರ್ಯನಿರ್ವಹಿಸುವ ಜಿಲ್ಲೆಯಲ್ಲಿಯೇ ಸಹಾಯಕ ನಿರ್ದೇಶಕರ ಕಚೇರಿ ಮೂಲಕ ಧನಸಹಾಯ ಕೋರಿಕೆ ಅರ್ಜಿಗಳನ್ನು ಸೆಪ್ಟೆಂಬರ್ 15 ರವರೆಗೆ ಸ್ವೀಕರಿಸಲಾಯಿತು ಮತ್ತು ಜಿಲ್ಲಾ ಹಂತದ ತಜ್ಞರ ಸಮಿತಿಯಲ್ಲಿ ಸ್ಥಳೀಯ ಪರಿಶೀಲನೆ ನಡೆಸಿ, ನಿಯಮಾನುಸಾರ ಸಲ್ಲಿಸಿದ ಅರ್ಜಿಗಳನ್ನು ಸಹಾಯಕ ನಿರ್ದೇಶಕರು ತಮ್ಮ ಶಿಫಾರಸ್ಸು ವರದಿಯೊಂದಿಗೆ ಕೇಂದ್ರ ಕಚೇರಿಗೆ ರವಾನಿಸಿದ್ದಾರೆ.

ಧನಸಹಾಯ ನೀಡಿಕೆ ಪ್ರಕ್ರಿಯೆಯಲ್ಲಿ ಸಾಂಸ್ಕೃತಿಕ ಕ್ಷೇತ್ರದ ವಿವಿಧ ತಜ್ಞ ಸದಸ್ಯರ ಮತ್ತು ಅಧಿಕಾರಿಗಳ ರಾಜ್ಯ ಮಟ್ಟದ ಸಮಿತಿ ರಚಿಸಲಾಯಿತು. ಆ ಸಮಿತಿಯು ಜಿಲ್ಲೆಗಳಿಂದ ಶಿಪಾರಸ್ಸಾದ ಅರ್ಜಿಗಳನ್ನು ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ವಿವರವಾದ ಪರಿಶೀಲನೆ ನಡೆಸಿದ ನಂತರ ವಿವಿಧ ಸಂಘ-ಸಂಸ್ಥೆಗಳಿಗೆ ಅವುಗಳ ಕ್ರಿಯಾ ಯೋಜನೆಗಳನ್ನು ಗಮನಿಸಿ ಅನುದಾನ ಬಿಡುಗಡೆ ಮಾಡುವ ಮೂಲಕ ಹೆಚ್ಚಿನ ಪ್ರೋತ್ಸಾಹ ನೀಡಲಾಗಿದೆ.